ಬೆಂಗಳೂರಿನ ತುಮಕೂರು ರಸ್ತೆ ಹಾಗೂ ಮಾಗಡಿ ರಸ್ತೆಗಳಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಯ ಪ್ರಾಂಗಣಗಳನ್ನು ಪ್ರಾರಂಭಿಸುವುದು

2389 (3036) : ಶ್ರೀ ಸುರೇಶ್‌ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿರುವ ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ (RMC Yard) ಪ್ರತಿದಿನ ಸಂಗ್ರಹವಾಗುವ ಮಾರುಕಟ್ಟೆ ಶುಲ್ಕವೆಷ್ಟು;

ಆ) ಈ ಪ್ರಾಂಗಣದಲ್ಲಿ ಸುಮಾರು 84 ಪರವಾನಗಿಗಳನ್ನು ನವೀಕರಿಸದೆ ರದ್ದು ಪಡಿಸುತ್ತಿರುವ ಕಾರಣವೇನು;

ಇ) ನಗರದ ಮಾಗಡಿ ರಸ್ತೆ, ತುಮಕೂರು ರಸ್ತೆಗಳನ್ನು ಹೊಸ ಪ್ರಾಂಗಣಗಳನ್ನು ಪ್ರಾರಂಭಿಸುವ ಸರ್ಕಾರದ ಕಾರ್ಯಕ್ರಮ ಯಾವ ಹಂತದಲ್ಲಿದೆ; ಈ ದಿಸೆಯಲ್ಲಿ ಖರ್ಚಾಗಿರುವ ಹಣವೆಷ್ಟು?

ಶ್ರೀ ಬಿ.ಎಸ್. ಪಾಟೀಲ್ (ಕೃಷಿ ಮಾರುಕಟ್ಟೆ ಸಚಿವರು)

ಅ) ಪ್ರತಿದಿನ ಸರಾಸರಿ ರೂ. 5.39 ಲಕ್ಷ ಮಾರುಕಟ್ಟೆ ಶುಲ್ಕ ಸಂಗ್ರಹವಾಗುತ್ತದೆ.

ಆ) 2003–04 ಸಾಲಿಗೆ ಕೆಳಕಂಡ ಕಾರಣಗಳಿಂದಾಗಿ ಒಟ್ಟು 71 ಲೈಸನ್ಸ್‌ಗಳನ್ನು ನವೀಕರಿಸಿರುವುದಿಲ್ಲ.

1.	ಅಧಿಸೂಚಿತ ಉತ್ಪನ್ನಗಳ ವ್ಯಾಪಾರ ವಹಿವಾಟಿನ ನಿರ್ಧಿಷ್ಟ ಸ್ಥಳವನ್ನು ಲೈಸನ್ಸ್ ಅರ್ಜಿಯಲ್ಲಿ ನಮೂದಿಸದೇ ಇರುವುದರಿಂದ.	38
2.	ಲೈಸನ್ಸ್ ನವೀಕರಣ ಅರ್ಜಿಯಲ್ಲಿ ನೀಡಿದ್ದ ವಿಳಾಸದಲ್ಲಿ ವ್ಯಾಪಾರ ವಹಿವಾಟು ನಡೆಸದೇ ಇರುವುದರಿಂದ.	31
3.	ಬಾಡಿಗೆಗೆ ಪಡೆದಿರುವ ಕಟ್ಟಡದಲ್ಲಿ ವ್ಯಾಪಾರ ಮಾಡಲು ಸಮಿತಿಯ ಅನುಮತಿ ಪಡೆಯದೇ ಇರುವುದರಿಂದ.	2

ಇ) ಮಾಗಡಿ ರಸ್ತೆಯಲ್ಲಿ ಶ್ರೀಗಂಧದ ಕಾವಲ್ ಪ್ರದೇಶದಲ್ಲಿ 172.22 ಎಕರೆ ಖಾಸಗಿ ಜಮೀನನ್ನು ಹಾಗೂ ಹೇರೋಹಳ್ಳಿ ಪ್ರದೇಶದಲ್ಲಿ 104.05 ಎಕರೆ ಖಾಸಗಿ ಜಮೀನು ಒಟ್ಟು 276.27 ಎಕರೆ ಭೂಸ್ವಾಧೀನಕ್ಕಾಗಿ ಬೆಂಗಳೂರು ಸಮಿತಿಯು ಕ್ರಮ ಜರುಗಿಸಿರುತ್ತದೆ. ಶ್ರೀಗಂಧದ ಕಾವಲ್ ಭೂಸ್ವಾಧೀನ ವಿಷಯದಲ್ಲಿ ಭೂಮಾಲೀಕರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ಯಥಾ ಸ್ಥಿತಿ ಕಾಪಾಡಲು ಮಧ್ಯಂತರ ಆದೇಶ ನೀಡಿದೆ. ಹೇರೋಹಳ್ಳಿಯಲ್ಲಿನ ಉದ್ದೇಶಿತ 104.05 ಎಕರೆ ಜಮೀನು ಪೈಕಿ 65.19 ಎಕರೆ ಜಮೀನನ್ನು ಸಮಿತಿಯ ವಶಕ್ಕೆ ಪಡೆಯಲಾಗಿದ್ದು, ಉಳಿದಂತೆ ಭೂ ಮಾಲೀಕರು ಭೂಸ್ವಾಧೀನ ಕ್ರಮದ ಕುರಿತು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿದ್ದು ಈ ಬಗ್ಗೆ ತಡೆಯಾಜ್ಞೆ ಇದ್ದು, ಪ್ರಕರಣವು ಇತ್ಯರ್ಥವಾಗಬೇಕಿರುತ್ತದೆ. ರೂ. 14.74 ಕೋಟಿಯನ್ನು ಭೂ ಸ್ವಾಧೀನ ಅಧಿಕಾರಿಗಳಿಗೆ ಠೇವಣಿಯಾಗಿ ಪಾವತಿಸಲಾಗಿದೆ.

ತುಮಕೂರು ರಸ್ತೆಯ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ, ಪಿಲ್ಲಹಳ್ಳಿ, ಶೇಷಗಿರಿ ಪಾಳ್ಯ, ಮತ್ತಹಳ್ಳಿ, ಒಡೆಯರಹಳ್ಳಿ, ಮತ್ತು ಹೊನ್ನಸಂದ್ರ ಗ್ರಾಮದ ಪ್ರದೇಶಗಳಲ್ಲಿ ಮಾರುಕಟ್ಟೆ ಪ್ರಾಂಗಣಕ್ಕಾಗಿ 188.09 1/2 ಎಕರೆ ಖಾಸಗಿ ಜಮೀನು ಮತ್ತು 168.27 ಎಕರೆ ಸರ್ಕಾರಿ ಜಮೀನು ಒಟ್ಟು 356.36 1/2 ಎಕರೆ ಜಮೀನು ಭೂಸ್ವಾಧೀನ ಕ್ರಮ ಪ್ರಗತಿಯಲ್ಲಿದೆ. ಖಾಸಗಿ ಜಮೀನಿನ ಸಂಬಂಧ ರೂ. 13,01,47,000/– ಹಣವನ್ನು ಭೂಸ್ವಾಧೀನ ಅಧಿಕಾರಿಗಳಲ್ಲಿ ಠೇವಣಿ ಇಡಲಾಗಿದೆ. 9.19 ಎಕರೆ ಜಮೀನಿನ ಭೂ ಮಾಲೀಕರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿದ್ದು ವಿಚಾರಣೆಯಲ್ಲಿದೆ. ಒಟ್ಟು ಜಮೀನಿನಲ್ಲಿ 140.24 1/2 ಎಕರೆಗೆ Consent award ಹಾಗೂ ಉಳಿದ 47.25 ಎಕರೆಗೆ ಜನರಲ್ ಅವಾರ್ಡ್ ನಿಗಧಿಪಡಿಸಿ, ಸರ್ಕಾರದ ಅನುಮೋದನೆಗೆ ಭೂಸ್ವಾಧೀನ ಅಧಿಕಾರಿಗಳು ಸಲ್ಲಿಸಿದ್ದಾರೆ. 168.27 ಎಕರೆ ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯಿಂದ ವರ್ಗಾಯಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರಿನ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆ ಕೂಪನ್ ವಿತರಿಸುವುದರ ಬಗ್ಗೆ

2390 (3051) : ಶ್ರೀ ಸುರೇಶ್ ಕುಮಾರ್ ಎಸ್. ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಡಿತರ ಚೀಟಿಗಳಿಗೆ 2003ನೇ ಸಾಲಿನಲ್ಲಿ ವಿತರಿಸಬೇಕಾಗಿದ್ದ ಸೀಮೆಎಣ್ಣೆ ಕೂಪನನ್ನು ಈಗಾಗಲೇ ಮುದ್ರಿಸಿದ್ದರೂ ಸಹ ಬೆಂಗಳೂರಿನಲ್ಲಿ ಇದುವರೆವಿಗೂ ಯಾವ ಕಾರಣಕ್ಕೆ ವಿತರಿಸಿಲ್ಲ;

ಆ) ಹಸಿರು ಪಡಿತರ ಚೀಟಿಯ ಬದಲಾಗಿ ಹಳದಿ ಪಡಿತರ ಚೀಟಿಯನ್ನು ವಿತರಿಸಲಾಗಿದ್ದು ಅದಕ್ಕೆ ವಿತರಿಸುವ ಅಕ್ಕಿ ಏನ್ನು ಪ್ರತಿ ಕೆ.ಜಿ.ಗೆ ರೂ. 6.00 ರಂತೆ ವಿತರಿಸಲಾಗುತ್ತಿದೆ. ಆದರೆ ಕೇಂದ್ರ ಸರ್ಕಾರದಿಂದ ಹಳದಿ ಪಡಿತರ ಚೀಟಿಗೆ (ಕಡು ಬಡವರಿಗೆ ವಿತರಿಸುವ ಪಡಿತರ ಚೀಟಿ) ವಿತರಿಸಬೇಕಾಗಿರುವ ಅಕ್ಕಿಯ ಬೆಲೆ ರೂ. 3.50 ಈ ವ್ಯತ್ಯಾಸಕ್ಕೆ ಕಾರಣವೇನು;

ಇ) ಈಗಾಗಲೇ ನಗರದಲ್ಲಿರುವ (ಬೆಂಗಳೂರು) ಕಡುಬಡವರಿಗೆ ಹಳದಿ ಪಡಿತರ ಚೀಟಿ ವಿತರಿಸಲು ಪಡೆದಿರುವ ಅರ್ಜಿಗಳನ್ನು ಪರಿಶೀಲಿಸಿ ಎಷ್ಟು ದಿವಸಗಳಲ್ಲಿ ಪಡಿತರ ಚೀಟಿಯನ್ನು ವಿತರಿಸಲಾಗುತ್ತದೆ?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರಿಕರ ಸರಬರಾಜು ಸಚಿವರು)

ಅ) ಈಗಾಗಲೇ ಹಳದಿ ಪಡಿತರ ಚೀಟಿಗಳಿಗೆ ಸೀಮೆಎಣ್ಣೆ ಕೂಪನ್‌ಗಳನ್ನು ವಿತರಿಸಲಾಗಿದೆ. ಎ.ಪಿ.ಎಲ್. ಪಡಿತರ ಚೀಟಿದಾರರಿಗೂ ಜುಲೈ 2003ರ ಮಾಹೆಯಿಂದ ಸೀಮೆಎಣ್ಣೆ ಕೂಪನ್ ವಿತರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಆ) ಹಸಿರು ಪಡಿತರ ಚೀಟಿದಾರರಿಗೆ ಅಕ್ಕಿಯ ಬೆಲೆಯನ್ನು ಪ್ರತಿ ಕೆ.ಜಿ. ಒಂದಕ್ಕೆ ರೂ. 6–15ರಂತೆ ಹಾಗೂ ಹಳದಿ ಪಡಿತರ ಚೀಟಿದಾರರಿಗೆ ಪ್ರತಿ ಕೆ.ಜಿ. ಒಂದಕ್ಕೆ ಅಕ್ಕಿಯ ಬೆಲೆಯನ್ನು ರೂ. 3–50 ರಂತೆ ಮೊದಲ 8 ಕೆ.ಜಿ. ಅಕ್ಕಿಯನ್ನು, 20 ಕೆ.ಜಿ. ಅಕ್ಕಿಯನ್ನು ಕೆ.ಜಿ. ಒಂದಕ್ಕೆ ರು. 6–15ರ ದರದಲ್ಲಿ ವಿತರಿಸಲಾಗುತ್ತಿದೆ. ಕರ್ನಾಟಕ ಸರ್ಕಾರವು ಎಲ್ಲ ನೈಜ ಬಿ.ಪಿ.ಎಲ್. ಕುಟುಂಬಗಳಿಗೆ ಸಹಾಯಧನಯುಕ್ತ ದರದಲ್ಲಿ ಆಹಾರಧಾನ್ಯಗಳನ್ನು ಒದಗಿಸುತ್ತಿರುವುದರಿಂದ ಈ ವ್ಯತ್ಯಾಸಕ್ಕೆ ಕಾರಣವಾಗಿರುತ್ತದೆ.